

ಎಡದಿಂದ ಬಲಕ್ಕೆ :

1. ಸಂಪ್ರದಾಯವನ್ನೇ ಅನುಸರಿಸಿದ ಸುಂದರ ಅಲಂಕಾರ (4)
3. ವಿಪರೀತ ಆಸೆಯಿಂದಾಗಿ ಎಲ್ಲರೊಡನೆಯೂ ವೈಮನಸ್ಯ (3)
4. ಸಹವಾಸವನ್ನು ಕೆಡಿಸಿಕೊಂಡದ್ದಕ್ಕೆ ಈಗ ಬರೀ ದುಃಖ (3)
6. ಪರಂಪರಾನುಗತ ಶಾಸ್ತ್ರಗಳಲ್ಲಿ ಆತ ಭಾರೀ ನಿಷ್ಣಾತ (4)
8. ತುಂಗಾ ತೀರದಲ್ಲಿ ನಿಂತಿರುವ ಎಲ್ಲರದೂ ಒಂದೇ ದರ್ಜೆ (4)
10. ಆತನ ಭಕ್ತರಾದವರೆಲ್ಲರದೂ ಕೆಂಬಣ್ಣದ ಬಟ್ಟೆ (4)
12. ವಂದಿಸುತ್ತಿರುವವನಾರು ನೋಡಿದಿರಾ ? ಸ್ವರ್ಗದ ಒಡೆಯ ಇಂದ್ರ ! (4)
16. ಕೊಂಡು ತಂದದ್ದನ್ನು ಹಿಂದಿರುಗಿಸಲು ಏಕಿಂಥ ಆತುರ ? (3)
17. ರಾಜ್ಯವನ್ನೆಲ್ಲ ಸುತ್ತಿ ಬಂದಾಕೆ ಈ ತರುಣಿ (3)
18. ಶಾಂತವಾಗಿರಿಸಲು ನೆರವಾದೀತೇ ಈ ಪ್ರಸಿದ್ಧ ಗಿಡಮೂಲಿಕೆ (4)

ಮೇಲಿಂದ ಕೆಳಕ್ಕೆ :

1. ಪರಿಸರ ಕುರಿತ ವಿವರಗಳನ್ನು ಎಲ್ಲೆಡೆ ಹರಡುವುದೇ ? (3)
2. ನಾವಿರುವಂತೆಯೇ ಇದ್ದರೂ ಹೊಸತನ ಹೇಗೆ ? (3)
3. ಗರ್ವಕ್ಕೆ ಬೆಲೆ ಸಿಗದೆ ಸಿಗದೆ ಈಗ ಸಂಪೂರ್ಣ ನಿರಾಸಕ್ತಿ (3)
5. ಈಶ್ವರನದೇ ಸೃಷ್ಟಿಯಾದರೂ ಯಾವುದೂ ನಾಶರಹಿತವಲ್ಲ (3)
6. ಆತನ ಸಕಲ ವ್ಯಾಪಾರಗಳಿಗೂ ಆಕರವಾದದ್ದು ಇದೇ ಅನಂತ ಸಾಗರ (4)
7. ಬಲಿಷ್ಠ ತೋಳಿರುವವರಿಗೇ ಸರಿ ಈ ಖಡ್ಗ (4)
8. ಹಳತಾದರೂ ಹೇಗಿದೆ ನೋಡಿ ಸುಭದ್ರ ಅಡಿಪಾಯ (4)
9. ಬದುಕಿನಲ್ಲಿ ತೃಪ್ತಿ ಲಭಿಸಲೆಂದು ಆತ ತಲುಪಿದ್ದು ಶ್ರೀನಿವಾಸನ ಊರು (4)
11. ಬಂದವರಿಗೇ ಎಲ್ಲವನ್ನೂ ಕೊಟ್ಟು ಕೊಟ್ಟು ಈಗ ಸಂಪೂರ್ಣ ಖಾಲಿ (3)
13. ವರ್ತಕನಾದೊಡನೆ ಇದೆಂಥ ನಡೆವಳಿಕೆ ! (3)
14. ಆಕಾಂಕ್ಷೆಗಳ ಮೇಲೂ ಹತೋಟಿ ಇರಲೇಬೇಕು (3)
15. ಮುಂಜಾನೆ ಅರಳಿದ ಹೂಗಳ ಸುಂದರ ಗೊಂಚಲು (3)

### 19-04-2018ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಧ್ವಾನ 3. ಕುಮಾರ 4. ವರಾತ 6. ಅವನತಿ 7. ಹಣಕಾಸು 9. ತರಾವರಿ 11. ಅಭಿಧಾನ (= ಹೆಸರು) 15. ತಿಜೋರಿ 16. ವಲ್ಲರಿ 17. ಮೆಲ್ಲುಲಿ

ಮೇಲಿಂದ ಕೆಳಕ್ಕೆ:


1. ಅರಸು 2. ನವಣೆ 3. ಕುಲೀನ 4. ತಲ್ಲಣ 6. ಅಮಿತ 8. ಸುಮ್ಮಾನ 10. ವಸತಿ 12. ಭಿಕಾರಿ 13. ಗರಿಮೆ 14. ಕಾವಲಿ

ಪ್ರಶ್ನಾಂಕಣ

## ವ್ಯೋಮ ವಾಹನ ಸ್ಮಶಾನ: ಅದೇನು?

ಅದು ಧರೆಯ ಅತ್ಯಂತ ವಿಸ್ತಾರ ಮಹಾ ಸಾಗರವಾದ ಶಾಂತ ಸಾಗರದ ದಕ್ಷಿಣ ಭಾಗದ ಒಂದು ವಿಶಿಷ್ಟ, ನಿರ್ದಿಷ್ಟ, ವಿಶಾಲ ಪ್ರದೇಶ ( ಚಿತ್ರ3 ರಲ್ಲಿ ಬಾಣದ ಗುರುತು ಸೂಚಿಸುತ್ತಿರುವ ಕಪ್ಪು ಚುಕ್ಕಿಯನ್ನು ನೋಡಿ ). ಅಂತರಿಕ್ಷದಿಂದ ಧರೆಗೆ ಧುಮುಕಿ ಬರುವ ಮೃತ ವ್ಯೋಮ ವಾಹನಗಳನ್ನು ಅಥವಾ ಅವುಗಳ ಭಗ್ನ ಭಾಗಗಳನ್ನು ಇಳಿಸಿ, ಶಾಶ್ವತವಾಗಿ ಜಲ ಸಮಾಧಿ ಗೊಳಿಸುವ ನೆಲೆ ಇದಾದ್ದರಿಂದ ಈ ಪ್ರದೇಶಕ್ಕೆ ಈ ಹೆಸರು!

'ಪಾಯಿಂಟ್ ನೀಮೋ' ಎಂಬ ಅಭಿಧಾನವನ್ನೂ ಪಡೆದಿರುವ ಈ ಸಾಗರ ಪ್ರದೇಶ ದ್ವಿವಿಧ ವೈಶಿಷ್ಟ್ಯಗಳನ್ನು ಹೊಂದಿದೆ. ಮೊದಲಿಗೆ ಅದು ಸಂಪೂರ್ಣ ಜನರಹಿತ. ಏಕೆಂದರೆ ಅದು ಯಾವುದೇ ನೆಲ ಪ್ರದೇಶದಿಂದ ಅತ್ಯಂತ ದೂರದಲ್ಲಿದೆ ; ಅದಕ್ಕೆ ಅತ್ಯಂತ ಸನಿಹದ ನೆಲ 2415 ಕಿಲೋ ಮೀಟರ್ ದೂರದಲ್ಲಿದೆ. ಎರಡನೆಯದಾಗಿ, ಪಾಯಿಂಟ್ ನೀಮೋ ಬಹುಪಾಲು ಜಲಚರ ರಹಿತ ಕೂಡ ! ಏಕೆಂದರೆ, ಅದು ಪ್ರಸಿದ್ಧ, ಪ್ರಬಲ, ವಿಶಾಲ "ಸಾಗರ ಸುಳಿ"ಯಾದ 'ಸೌತ್ ಪೆಸಿಫಿಕ್ ಗೈರ್' ಪ್ರದೇಶದಲ್ಲಿದೆ. ಅಲ್ಲಿನ ಸಾಗರ ಪ್ರವಾಹಗಳ ವಿಚಿತ್ರ, ವೃತ್ತೀಯ ಪರಿಚಲನೆಯಿಂದಾಗಿ ಅದರಾಚಿನ ಕಡಲಿನಿಂದಾಗಲೀ, ಕಡಲ ತೀರಗಳಿಂದಾಗಲೀ ಯಾವುದೇ ಜೀವಿ ಪೋಷಕಾಂಶವೂ ತಲುಪುವುದಿಲ್ಲ. ಅಷ್ಟೇ ಅಲ್ಲದೆ, ಹಡಗುಗಳ ಸಂಚಾರವೂ ಈ ಹಾದಿಯಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಹಾಗಾಗಿ 'ಯಾರೂ ಇಲ್ಲದ' (ಲ್ಯಾಟಿನ್ ಭಾಷೆಯಲ್ಲಿ 'ಪಾಯಿಂಟ್ ನೀಮೋ' ಎಂದರೆ ಅದೇ ಅರ್ಥ) ಈ ನೆಲೆಯನ್ನು ಎಲ್ಲ ರಾಷ್ಟ್ರಗಳೂ ತಮ್ಮ ಮೃತ ವ್ಯೋಮ ವಾಹನಗಳನ್ನು ಸಮಾಧಿ ಮಾಡಲು ಬಳಸುತ್ತಿವೆ.




ನಿಮಗೇ ತಿಳಿದಿರುವಂತೆ, ಅಂತರಿಕ್ಷದಲ್ಲಿ ಸಾವಿರಾರು ಕೃತಕ ಉಪಗ್ರಹಗಳು 'ಕಿಕ್ಕಿರಿದು' ಧರೆಯನ್ನು ಪರಿಭ್ರಮಿಸುತ್ತಿವೆ (ಚಿತ್ರ 1). ಚಿಕ್ಕ ಪುಟ್ಟ ಗಾತ್ರಗಳಿಂದ ಬೃಹದಾಕಾರದ 'ಸ್ಪೇಸ್ ಸ್ಟೇಶನ್' (ಚಿತ್ರ 2) ಗಳವರೆಗೆ ಅವುಗಳದು ವಿಭಿನ್ನ ಗಾತ್ರ. ಸ್ಪಷ್ಟವಾಗಿಯೇ, ಈ ಉಪಗ್ರಹಗಳು ಮತ್ತು ವ್ಯೋಮ ವಾಹನಗಳು ಶಾಶ್ವತವಾಗಿ, ಕ್ರಿಯಾಶೀಲವಾಗಿ ಉಳಿಯುವ ನಿರ್ಮಿತಿಗಳಲ್ಲ. ಕೆಲವೇ ವರ್ಷಗಳಿಂದ ಒಂದೆರಡು ದಶಕಗಳವರೆಗಷ್ಟೇ ಅವುಗಳ ಆಯುಷ್ಯ. ಹಾಗೆ ಜೀವಿತಾವಧಿ ಮುಗಿದ, ಇಲ್ಲವೇ ಅದಕ್ಕೆ ಮೊದಲೇ ಕೆಟ್ಟುಹೋಗುವ ವ್ಯೋಮ ವಾಹನಗಳನ್ನು ಅಂತರಿಕ್ಷದಲ್ಲೇ ಕಾಯ್ದುಕೊಳ್ಳುವುದು ಸಾಧುವೂ ಅಲ್ಲ ; ಅದು ಸಾಧ್ಯವೂ ಇಲ್ಲ. ಅಂಥ ವಾಹನಗಳು, ಅವುಗಳನ್ನು ಅಂತರಿಕ್ಷಕ್ಕೆ ತಲುಪಿಸುವ ರಾಕೆಟ್ ಗಳ ಭಾಗಗಳು, ಸ್ಪೇಸ್ ಸ್ಟೇಶನ್ ಗಳಿಗೆ ಸಾಮಗ್ರಿಗಳನ್ನು ಒಯ್ದು ಅಲ್ಲಿಂದ ವ್ಯರ್ಥ ವಸ್ತುಗಳನ್ನು ಹೊತ್ತು ಹಿಂದಿರುಗುವ ಸಾಧನಗಳು.. ಅಂಥವೆಲ್ಲ ನಿರ್ಮಿತಿಗಳು ವಾತಾವರಣದಲ್ಲಿ ಉರಿಯುತ್ತ ಎಲ್ಲೆಂದರಲ್ಲಿ ಬೀಳಲು ಬಿಡದೆ, ಪೂರ್ವಯೋಜಿತ ಹಾದಿಯಲ್ಲಿ ಭೂಮಿಗೆ ಇಳಿಸಿ, ಜಲ ಸಮಾಧಿಗೊಳಿಸಿ, ಶಾಶ್ವತವಾಗಿ ಅಪಾಯ ರಹಿತವಾಗಿ ಉಳಿಸಲು ಬಳಸಲಾಗುತ್ತಿರುವ ನೆಲೆಯೇ 'ಪಾಯಿಂಟ್ ನೀಮೋ'. ಅದೇ ವ್ಯೋಮ ವಾಹನಗಳ ಸ್ಮಶಾನ.

1971 ರಿಂದ ಈ ವರೆಗೆ ಸಮೀಪ 265 ವ್ಯೋಮ ವಾಹನಗಳು ಮತ್ತುಅವುಗಳ ಬೃಹತ್ ಭಗ್ನ ಭಾಗಗಳು ಪಾಯಿಂಟ್ ನೀಮೋವನ್ನು ಪ್ರವೇಶಿಸಿವೆ ; ಸಾಗರದ ಮೇಲ್ಮೈನಿಂದ ನಾಲ್ಕು ಕಿಲೋ ಮೀಟರ್ ಆಳದ, ಕಾರ್ಗತ್ತಲು ಕವಿದ ಕಡಲ ತಳದಲ್ಲಿ ಹರಡಿ ನಿಶ್ಚಲವಾಗಿ ಉಳಿದಿವೆ.

■ ಎನ್. ವಾಸುದೇವ್